ಅದಕ್ಕೆ ಮಂತ್ರಿಗಳು ಅಪ್ರೂವ್ ಕೊಡುವಾಗ ನಿನ್ನೆ ಮತ್ತೆ ಈ ವಿಷಯ ಅವರ ಮುಂದೆ ಬರುವಾಗ ಕೂಡ upto date information ತರಬೇಕಾಗಿತ್ತು. ಅದಕ್ಕೆ ನಾನು ಬಹಳ ವಿಷಾಧ ಪಡುತ್ತೇನೆ. This is a lapse on the part of the Finance Department. It does not deserve to be condoned. It should be seriously taken note of. ಸ್ವಾಮಿ, ಈಗ ಮತ್ತೆ ಒಂದು ಮಾತು ಹೇಳಿದರು. ಹಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು. ಇದು ಹಣ ಬಿಡುಗಡೆ ಮಾಡತಕ್ಕಂಥ ಪ್ರಶ್ನೆ ಆಗುವುದಿಲ್ಲ. ರಾಜ್ಯ ಸರ್ಕಾರದ ಪಾಲು ಕೇಂದ್ರ ಸರ್ಕಾರದ ಪಾಲು ಒಟ್ಟಿಗೆ ಸೇರಿ 1557 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇದು ಯೋಜನೆಗೆ ಸಂಬಂಧಪಟ್ಟಂತಹ ಹಣ. ಆದ್ದರಿಂದ ಹಣ ಒದಗಿಸತಕ್ಕಂಥ', ಬಿಡುಗಡೆ ಮಾಡತಕ್ಕಂಥ' ಪ್ರಶ್ನೆ ಅಲ್ಲ ಹಾಗಾಗಿ ಇವತ್ತು 578 ಕೋಟಿ ರೂಪಾಯಿಗಳು ಅಭಿವೃದ್ಧಿಗೆ ಸಂಬಂಧಪಟ್ಟಂತಹ ಹಣ ಖರ್ಚಾಗಿಲ್ಲ. ಆಷ್ಟರ ಮಟ್ಟಿಗೆ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ. ಕೆಲವು ಇಲಾಖೆಗಳಿಗೆ ನೂರಕ್ಕೆ ನೂರರಷ್ಟು ಕೇಂದ್ರದ ಹಣ ಬರುತ್ತದೆ. ಕೆಲವು ಇಲಾಖೆಗಳಿಗೆ ನಾವು ಒದಗಿಸಬೇಕಾಗುತ್ತದೆ. ಇದು ಎಷ್ಟು ಬೇಗ ಎಂಬ ಡೀಟೇಲ್ಸ್ ಯೋಜನಾ ಮಂತ್ರಿಗಳಿಗೆ ಗೊತ್ತಿರುತ್ತದೆ ಮತ್ತು ಅರ್ಥ ಇಲಾಖೆಗೆ ಸಂಬಂಧಪಟ್ಟಂತಾದ್ದು ಗೊತ್ತಿರುತ್ತದೆ. ಆದ್ದರಿಂದ ಇವತ್ತು ಏನು ಅವರು ಒದಗಿಸಿದ್ದಾರೆ ಇದು ಬಹಳ ವಿಷಾದದ ಸಂಗತಿ. 1557 ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಯಲ್ಲಿ 578 ಕೋಟಿ ರೂಪಾಯಿಗಳು.

ಉಪಾಧ್ಯಕ್ಷಣಿಯವರು:- ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿ ಮುಗಿಸಿಬಿಡಿ. ಬೇಗ ಮುಗಿಸಿ ಇನ್ನು 14-15 ಪ್ರಶ್ನೆಗಳು ಇವೆ. ವಿಷಯ ನೇರವಾಗಿ ಕೇಳಿ.

ಶ್ರೀ ಕೆ.ಹೆಚ್.ರಂಗನಾಥ್:- ಆದ್ದರಿಂದ 578 ಕೋಟಿ ರೂಪಾಯಿಗಳಷ್ಟು ಅಭಿವೃದ್ಧಿ ಕುಂಠಿತವಾಗಿದೆ. ಇದಕ್ಕೆ ಸರ್ಕಾರದವರು ಏನು ಉತ್ತರ ಕೊಡುತ್ತಾರೆ ? ಮತ್ತೆ ಮಂತ್ರಿಗಳು 31ಕ್ಕೆ ನಾವು ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದರು. ನನಗನಿಸುತ್ತದೆ, ಅದು ಸರಿಯಾದಂಥ ರೀತಿಯಲ್ಲ. ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಯೋಜನೆಗೆ ಸಂಬಂಧಪಟ್ಟ ಹಣ, ಏನು ಇದೆ ಅದನ್ನು ಖರ್ಚು ಮಾಡಲಿಕ್ಕೆ ಬರುವುದಿಲ್ಲ. The whole amount is going to be lapsed also. ಮಾನ್ಯ ಮಂತ್ರಿಗಳು ಹೇಳುವಾಗ ಜಿಲ್ಲಾ ವಲಯಕ್ಕೆ ಸಂಬಂಧಪಟ್ಟಂತೆ ಅದನ್ನು ಅಲ್ಲೇ ಬಿಡುತ್ತೇವೆಂದು ಹೇಳಿದರು. ಇದಕ್ಕೆ ಮಾನ್ಯಮಂತ್ರಿಗಳು ಸರಿಯಾಗಿ ಸಮಜಾಯಿಷಿ ಕೊಡಬೇಕು. ಬಹಳ ಮಟ್ಟಿಗೆ ಅವರಿಗೆ ಉತ್ತರ ಸರಿಯಾಗಿ ಒದಗಿಸಲ್ಪಡದಿದ್ದರೆ ಅದಕ್ಕೆ ಇಲಾಖೆಯವರಿಂದ ಸಮಜಾಯಿಷಿಯನ್ನು ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇನೆ. ಏನು 578 ಕೋಟಿ ರೂಪಾಯಿಯಷ್ಟು ಯೋಜನೆ ಕುಂಠಿತವಾಗಿದೆ, ಅದಕ್ಕೆ ಸರ್ಕಾರ ಸರಿಯಾದಂಥ ಉತ್ತರವನ್ನು ಕೊಡಬೇಕೆಂದು ನಾನು ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ:- ಅಧ್ಯಕ್ಷರೆ, ನಾನು ಮೊದಲೇ ಹೇಳಿದ ಹಾಗೆ, ಇದು ಜನವರಿಯವರೆಗೆ ಮಾತ್ರ ಕೊಟ್ಟಿರತಕ್ಕಂಥ ಖರ್ಚಿನ ವಿವರ. ಯಾವಾಗಲೂ ಕೊನೇ ಎರಡು ಮೂರು ತಿಂಗಳ್ಲೇ ಖರ್ಚಾಗುವುದು. ಯಾವಾಗಲೂ ಬಾಕಿ ಬಿಲ್ಸ್ ಇರುತ್ತವೆ. ಅದು ಪೇಮೆಂಟ್ ಆಗುವುದಕ್ಕೆ ಬರುತ್ತದೆ. ಮಳೆಗಾಲದಲ್ಲಿ ಏನು ಕೆಲಸವಾಗಿರುತ್ತದೆ ಅದರ ಪೆಂಡಿಂಗ್ ಬಿಲ್ಸ್ ಕೊಡುವುದಕ್ಕೆ ಬರುತ್ತದೆ. ಈಗ ಅದನ್ನು ಕೊಡಬೇಕು. ಈಗ ಈ ವೆಚ್ಚವೂ ಸೇರುತ್ತದೆ. ಪೂರ್ತಿ ಹಣ ಖರ್ಚಾಗಿಲ್ಲವೆಂದು ನಾನು ಒಪ್ಪುತ್ತೇನೆ. ಅದಕ್ಕೆ 1 ತಿಂಗಳು ಟೈಮ್ ಕೊಟ್ಟಿದ್ದೇನೆ. ಆ ಖರ್ಚೆಲ್ಲಾ ನಾವು ಮಾಡುತ್ತೇವೆಂದು ಆರ್.ಡಿ.ಪಿ.ಆರ್.ನವರು ಹೇಳುತ್ತಾರೆ. ವಿವಿಧ ಇಲಾಖೆಗಳಿಂದಲೂ ಸಹ ಇದು ಖರ್ಚಾಗಬೇಕಾಗುತ್ತದೆ. ಅದರ ಮಾಹಿತಿಯನ್ನು ನಂತರ ತರಿಸಿಕೊಡುತ್ತೇನೆ.

ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಬಗ್ಗೆ.

(2158) ಶ್ರೀ ಅಜಯ್‌ಕುಮಾರ್ ಸರ್ನಾಯಕ್ (ಬಾಗಲಕೋಟೆ)ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಈಗಿನ ಬಾಗಲಕೋಟೆ ನಗರ ಅಭಿವೃದ್ಧಿ ಪ್ರಾಧಿಕಾರವನ್ನು ವಿಸರ್ಜಿಸಿ ಹಾಗೂ ಬಾಗಲಕೋಟೆ ನಗರ ಪುನರ್ವಸತಿ ಕಾರ್ಯವನ್ನು ಬೇಗನೇ ಕೈಗೆತ್ತಿಕೊಂಡು ಮುಗಿಸಲು ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಪುನರ್ವಸತಿ ವೃತ್ತ ಕಾರ್ಯಾಲಯವನ್ನು ಸ್ಥಾಪಿಸಲು ವಿಶ್ವ ಬ್ಯಾಂಕಿನಿಂದ ಯಾವುದಾದರೂ ಮಾರ್ಗಸೂಚಿ ಇವೆಯೇ?

ಆ) ಹಾಗಿದ್ದರೆ ಇದರ ಬಗ್ಗೆ ಸರ್ಕಾರವು ಬಾಗಲಕೋಟೆ ನಗರ ಅಭಿವೃದ್ಧಿ ಪ್ರಾಧಿಕಾರವನ್ನು ರದ್ದುಗೊಳಿಸುವ ತನ್ನ ಹಿಂದಿನ ನಿರ್ಧಾರದಿಂದ ಹಿಂದಕ್ಕೆ ಸರಿದಿದೆಯೇ ?

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ :- ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಪ್ರಶ್ನೆ. Whether there was any pressure on the Government to abolish.B.T.D.A.? ಅದಕ್ಕೆ ಅವರು ಉತ್ತರ ಇಲ್ಲವೆಂದು ಕೊಟ್ಟಿದ್ದಾರೆ. ಆಮೇಲೆ ಎರಡನೇ ಪ್ರಶ್ನೆಯಲ್ಲಿ ಹಾಗಿದ್ದರೆ ಇದರ ಬಗ್ಗೆ ಸರ್ಕಾರವು ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರವನ್ನು ರದ್ದುಗೊಳಿಸುವ ತನ್ನ ಹಿಂದಿನ ನಿರ್ಣಯಕ್ಕೆ ಹಿಂದಕ್ಕೆ ಸರಿದಿದೆಯೇ ಎಂದು ಕೇಳಿದ್ದಕ್ಕೆ, ಉದ್ಭವಿಸುವುದಿಲ್ಲವೆಂದು ಕೊಟ್ಟಿದ್ದಾರೆ. ಈ ರೀತಿ ಉತ್ತರ ಕೊಡುವುದರಿಂದ ಸರ್ಕಾರವು ಈ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದೆಯೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಈಗಾಗಲೇ, ಹಿಂದೆ ಮೇಲ್ಮನೆಯಲ್ಲಿ ಮಾನ್ಯ ಸೋರಗಾವಿಯವರು ಪ್ರಶ್ನೆ ಕೇಳಿದ್ದಾಗ, ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರವನ್ನು ರದ್ದುಪಡಿಸಲು, ಬಾಗಲಕೋಟೆ ಪುನರ್‌ವಸತಿ ಕೇಂದ್ರವನ್ನು ರಚಿಸುವ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ ಎಂದು ಕೇಳಿರುವುದಕ್ಕೆ, 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ ಇದನ್ನು ಅನುಷ್ಠಾನಕ್ಕೆ ಯಾವಾಗ ತರಲಾಗುವುದೆಂದು ಎಂದಾಗ ಅತಿ ಜರೂರಾಗಿ ಅನುಷ್ಠಾನಕ್ಕೆ ತರಲಾಗುವುದೆಂದು ಎಂದಿದ್ದಾರೆ. ಆಮೇಲೆ ಈ ಬಾಗಲಕೋಟೆ ಪ್ರಾಧಿಕಾರವನ್ನು ಅಬಾಲಿಷ್ ಮಾಡಲಿಕ್ಕೆ ಒಂದು ಕ್ಯಾಬಿನೆಟ್ ಡಿಸಿಷನ್ ಕೂಡ ತೆಗೆದುಕೊಂಡಿದ್ದರು. ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡು, ಏಕೆ ಇದನ್ನು ರದ್ದುಮಾಡಲಿಕ್ಕೆ ಡಿಸಿಷನ್ ತೆಗೆದುಕೊಂಡಿದ್ದೀರಿ ಮತ್ತು ಬಾಗಲಕೋಟೆ ಪ್ರಾಧಿಕಾರವನ್ನು ಏಕೆ ಅನುಷ್ಠಾನಕ್ಕೆ ತಂದಿರಿ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಕೆ.ಜೆ.ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೆ, ಅವರ ಪ್ರಶ್ನೆ " Whether there is World Bank Guidelines to wind up B.T.D.A...." ನಾವು ಇಲ್ಲವೆಂದು ಹೇಳಿದ್ದೇವೆ. " If so, whether the Government has gone back from its earlier decision for winding up of Bagalkot Town Development Authority ?" "Does not arise."

ಶ್ರೀ ಡಿ.ಬಿ.ಚಂದ್ರೇಗೌಡ:- ಇವತ್ತು ಅಪ್ಪರ್ ಕೃಷ್ಣಾ ಡೆವಲಪ್‌ಮೆಂಟ್ ಅಥಾರಿಟಿ ಬರುತ್ತಿದೆ. ಈಗ ಇಲ್ಲಿರತಕ್ಕಂಥ ಪ್ರಶ್ನೆ ಏನೆಂದರೆ, 1984 ರಲ್ಲಿ ಬಾಗಲಕೋಟೆ ಡೆವಲಪ್‌ಮೆಂಟ್ ಅಥಾರಿಟಿ ಒಂದನ್ನು ನಿರ್ಮಾಣ ಮಾಡಿದ್ದಾರೆ. ಇದಾದಮೇಲೆ 5-3-1991ರಲ್ಲಿ ಈ ಸದನದಲ್ಲಿ ಇರಬಹುದು, ಆ ಸದನದಲ್ಲಿ ಇರಬಹುದು. ಉತ್ತರ ಕೊಡುತ್ತಾ, ಈ ಒಂದು ಬಾಗಲಕೋಟೆ ಡೆವಲಪ್‌ಮೆಂಟ್ ಅಥಾರಿಟಿಯನ್ನು ವಜಾ ಮಾಡಿದ್ದೇನೆಂದು ಹೇಳಿದರು. ವಜಾ ಮಾಡಿ ಮುಂದೆ ಏನು ಮಾಡಿದರು ಎಂದರೆ. Functional

Committee ಎರಡು ಮಾಡಿದರು, ಇನ್ನೊಂದು ರೆಹಾಬಿಲಿಟೇಷನ್ ಕಮಿಟಿ ಎಂದು ಮಾಡಿದರು. ಹೀಗೆ ಎರಡು ಕಮಿಟಿಗಳ ರಚನೆ ಆಯಿತು. ಈಗ ಪುನಃ 16-3-91 ಕ್ಕೆ ಒಂದು ಡಿಸ್ಕ್ರಿಪ್ಶ್ ಡೆವಲಪ್‌ಮೆಂಟ್ ಕಮಿಟಿ ಮೀಟಿಂಗ್‌ನಲ್ಲಿ ಈ ಮಾತನ್ನು ನೀವು ಒಪ್ಪಿಕೊಳ್ಳುತ್ತೀರಿ. ಈಗ ಪುನಃ ಪ್ರಶ್ನೆ ಏನು ಬಂದಿದೆ ಎಂದರೆ, ಈಗ ಬಾಗಲಕೋಟೆ, ಆಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ ಮೊದಲನೇ ಹಂತದಲ್ಲಿ ಎಷ್ಟು ಮುಳುಗಡೆಯಾಗುತ್ತದೆ, ಎರಡನೇ ಹಂತದಲ್ಲಿ ಎಷ್ಟು ಮುಳುಗಡೆಯಾಗುತ್ತದೆ ಎನ್ನುವುದು ನಿಮಗೆ ಗೊತ್ತಿದೆ. ಆದ್ದರಿಂದ ಆ ನಗರವನ್ನು ಪೂರಾ ಮುಳುಗಡೆ ಪ್ರದೇಶ ಎಂದು ಘೋಷಣೆ ಮಾಡಿ ಅದನ್ನು ಸ್ಥಳಾಂತರಿಸಬೇಕು ಎನ್ನುವ ನಿರ್ಧಾರವನ್ನು ಸರ್ಕಾರ ಈಗಾಗಲೇ ತೆಗೆದುಕೊಂಡಿದೆ ಎಂದು ನನಗೆ ಇರತಕ್ಕಂಥ ಮಾಹಿತಿ. ಹಾಗೆ ತೆಗೆದುಕೊಂಡಿರತಕ್ಕಂಥ ಸಂದರ್ಭದಲ್ಲಿ ಮತ್ತೊಂದು ಬಾಗಲಕೋಟೆ ಡೆವಲಪ್‌ಮೆಂಟ್ ಅಥಾರಿಟಿಯ ಆವಶ್ಯಕತೆ ಏನಿದೆ ? ಮತ್ತೆ ಇವತ್ತು ಆಪ್ಪರ್ ಕೃಷ್ಣಾ ಡೆವಲಪ್‌ಮೆಂಟ್ ಅಥಾರಿಟಿಯನ್ನು ಏನು ಮಾಡುತ್ತಿದ್ದೀರಿ ಆ ವ್ಯಾಪ್ತಿಯೊಳಗೆ ಈ ಒಂದು ಅಥಾರಿಟಿಯನ್ನು ಮಾಡುವುದಿಲ್ಲವೆಂದು ಹೇಳಿದರೆ ಸಾಕು.

ಶ್ರೀ ಕೆ.ಜೆ.ಜಾರ್ಜ್ :- ಶ್ರೀ ಅಜಯ್‌ಕುಮಾರ್ ಸರ್‌ನಾಯಕರು ಏನು ಕೇಳಿದ್ದಾರೆಂದರೆ, ವಿಶ್ವಬ್ಯಾಂಕ್ ಡೈರೆಕ್ಷನ್ ಕೊಟ್ಟಿದೆಯಾ ಅಂತ ಅಂದಿದ್ದಕ್ಕೆ ಇಲ್ಲ ಎಂದು ಹೇಳಿದ್ದೇನೆ. ಅಂದರೆ ಅವರು ಕೊಟ್ಟಿದ್ದರೆ, if so, the Government has gone back on its word" ಏಕೆಂದರೆ ವಿಶ್ವ ಬ್ಯಾಂಕಿಗೆ ವೈಂಡ್ ಅಪ್ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದೇವೆ. ಅದು ಅವರ ಪ್ರಶ್ನೆಗೆ ಉತ್ತರ ಆದರೆ ತಾವು ಸಂಪೂರ್ಣವಾಗಿ ಬೇರೆ ಪ್ರಶ್ನೆ ಎತ್ತಿದ್ದೀರಿ.

ಶ್ರೀ ಡಿ.ಬಿ.ಚಂದ್ರೇಗೌಡ :- ಇಲ್ಲಿಗೆ ನಾನು ಮಾಹಿತಿ ತರುವುದಕ್ಕಾಗಲಿಲ್ಲ. ನನ್ನ ಮಾಹಿತಿ ಪ್ರಕಾರ ವಿಶ್ವಬ್ಯಾಂಕ್ ಸಹಾಯ ಕೊಡುವುದಕ್ಕೆ ಮುಂದೆ ಇದನ್ನು ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ. Please be cautious about it. If you want, we try to produce the document.

ಶ್ರೀ ಕೆ.ಜೆ.ಜಾರ್ಜ್ :- ನನ್ನ ಪ್ರಕಾರ ವಿಶ್ವಬ್ಯಾಂಕಿನವರು ಸಜೆಷನ್ ಕೊಟ್ಟಿದ್ದಾರೆ. Suggestion is entirely different and direction is entirely different. ಅವರ ಸಜೆಶನ್ ಏನೆಂದರೆ, ಡ್ಯೂಯಲ್ ಅಥಾರಿಟಿ ಆಗುತ್ತದೆ. ಕಂದಾಯ ಇಲಾಖೆಯವರು ಪುನರ್ವಸತಿ ಮಾಡುತ್ತಾರೆ. ಇದಕ್ಕಾಗಿ ಒಂದು ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬೇಕಾಗುತ್ತದೆಂದು ಸಜೆಶನ್ ಕೊಟ್ಟಿದ್ದಾರೆ. ನಮ್ಮ ಪ್ರಶ್ನೆ ಎಂದರೆ 14-3-91 ರಲ್ಲಿ ಕ್ಯಾಬಿನೆಟ್ ಒಂದು ಡಿಸಿಶನ್ ತೆಗೆದುಕೊಂಡಿತ್ತು, ಏನೆಂದರೆ ಇದನ್ನು ಅಬಾಲಿಷ್ ಮಾಡಿಬಿಟ್ಟು ಜಿಲ್ಲಾಮಟ್ಟದಲ್ಲಿ ಒಂದು ಪುನರ್ವಸತಿ ಕಮಿಟಿ ಮಾಡೋಣ. ನಂತರ ನಾವು 21-11-91ರಲ್ಲಿ we re-considered earlier the Cabinet decision. ಏನೆಂದರೆ ಇಡೀ ಜಿಲ್ಲೆಗೆ ಒಂದು ಪುನರ್ವಸತಿ ಕಮಿಟಿ ಮಾಡಿದರೆ ಅದರಿಂದ ಬಾಗಲಕೋಟೆ ಪಟ್ಟಣವನ್ನು ಪುನರ್ವಸತಿ ಮಾಡಬೇಕಾದರೆ ಸುಮಾರು ಒಂದು ಲಕ್ಷ ಜನ ಇರುವಂತಹ ನಗರ ಪ್ರದೇಶವನ್ನೇ ರಿಹ್ಯಾಬಿಲಿಟೇಟ್ ಮಾಡಬೇಕಾಗುತ್ತದೆ. ಅದರಿಂದ ತುಂಬ ಕೆಲಸಗಳು ಮಾಡಬೇಕಾಗುತ್ತದೆ. ಇದುವರೆಗೂ ಕರ್ನಾಟಕದಲ್ಲಿ ಅಷ್ಟು ದೊಡ್ಡ ಟೌನನ್ನು ರಿಹ್ಯಾಬಿಲಟೇಟ್ ಮಾಡಿಲ್ಲ. ಮಾಡಬೇಕಾದರೆ ಅದಕ್ಕೆ ನೀರು, ವಿದ್ಯುತ್, ರಸ್ತೆ ಕೊಡಬೇಕಾಗುತ್ತದೆ, ಉಳಿದ ಸಿವಿಲ್ ಅಮೆನಿಟೀಸ್ ಕೊಡಬೇಕಾಗುತ್ತದೆ. ಫ್ಯೂಚರ್ ಅಭಿವೃದ್ಧಿ ನೋಡಿಕೊಳ್ಳಬೇಕಾಗುತ್ತದೆ. ಇದು ಕಂಟಿನ್ಯೂ ಸಾಗುತ್ತದೆ. ಅನಂತರ ಕ್ಯಾಬಿನೆಟ್‌ನಲ್ಲಿ ನಾವು ಏನು ತೀರ್ಮಾನ ತೆಗೆದುಕೊಂಡೆವು ಅಂದರೆ ಇಡೀ ಜಿಲ್ಲೆಯನ್ನು ಪುನರ್ವಸತಿ ಪ್ರೋಸಸ್‌ಗೆ ಸೇರಿಸಿದರೆ ಸಾಕಾಗುವುದಿಲ್ಲ ಅದಕ್ಕೆ ಡಾ.ಕಂಠಿ ಎಂಬ ಒಬ್ಬರನ್ನು ಫುಲ್‌ಟೈಮ್ ಅಧ್ಯಕ್ಷರನ್ನು ಮಾಡಿ ಈಗಾಗಲೇ ಸಾಕಷ್ಟು ಭೂಸ್ವಾಧೀನ ನಡವಳಿಕೆ ಮಾಡಿದ್ದಾರೆ, ಸುಮಾರು 4500 ಎಕರೆಯಲ್ಲಿ ಸುಮಾರು 2500 ಎಕರೆ ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನ ಮಾಡಿ ಕೈಗೆ ಪೊಜಿಶನ್ ತೆಗೆದುಕೊಂಡಿದ್ದಾರೆ. ಬಾಕಿ acquisition proceedings are under process. ಇದನ್ನೆಲ್ಲಾ ನೋಡಿ ನಾವು we have

taken a decision to continue this Bagalkot Development Authority. ಕಂಟಿನ್ಯೂ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಹಣ ಕೂಡ ಪಿಡಬ್ಲ್ಯುಡಿ ಇಲಾಖೆಗೆ ಬಂದಿದೆ. ಆದಷ್ಟು ಬೇಗ ಒಳ್ಳೆಯ ಟೌನ್‌ಶಿಪ್ ಅನ್ನು ಮಾಡುವ ಕೆಲಸ ನಾವು ಮಾಡುತ್ತೇವೆ.

ಶ್ರೀ ಡಿ.ಬಿ.ಚಂದ್ರೇಗೌಡ :- ಈಗ ಪುನಃ ಡ್ಯೂಯಲ್ ಅಥಾರಿಟಿ ಇರಬಾರದೆಂಬ ಸದಿಚ್ಛೆಯಿಂದ ಅದನ್ನು ಮೊದಲು ವಜಾಮಾಡಿದಿರಿ, ಈಗ ಅದರ ಅಗತ್ಯ ಇದೆ ಎಂದು ಕಂಡು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಇವತ್ತು ಬಿಲ್ ಬರುತ್ತಿದೆ, ಕೃಷ್ಣಾ ಅಭಿವೃದ್ಧಿ ಪ್ರಾಧಿಕಾರ ಅವರ ವ್ಯಾಪ್ತಿಯಲ್ಲಿ ಇವೆಲ್ಲ ಬಂತು. ಆಗ dual authority ಆಗುವುದಿಲ್ಲವೆ? Why should there be another additional Committee if I take it that way ? They want to rehabilitate a person to accommodate in a Committee, and not for rehabilitation of Bagalkot ಎಂದು ಹೇಳಿದರೆ ಮಂತ್ರಿಗಳು ಒಪ್ಪುತ್ತಾರೆಯೇ? There should be some sort of ...

ಶ್ರೀ ಕೆ.ಜೆ.ಜಾರ್ಜ್:- ಕೃಷ್ಣಾ ಅಭಿವೃದ್ಧಿ ಪ್ರಾಧಿಕಾರದಲ್ಲಿ ತಮಗೆ ಗೊತ್ತಿರುವಂತೆ ಆ ಪ್ರದೇಶದಲ್ಲಿ ನೀರಾವರಿ ಕೆಲಸಗಳನ್ನು ಮಾಡುವುದು. ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರದ್ದು ಆ ಪಟ್ಟಣವನ್ನು ಅಭಿವೃದ್ಧಿ ಪಡಿಸುವ ಕೆಲಸ. ಎರಡೂ ಬೇರೆ ಬೇರೆ ಕೆಲಸಗಳು. ಈಗ ಬಿಡಿಎ ಇದೆ, ಬೆಂಗಳೂರು ಸಿಟಿ ಕಾರ್ಪೊರೇಷನ್ ಇದೆ ಅಂತ ಕೇಳಿದರೆ ? ಈಗ ನಾವು ಟಾನ್ ಅಭಿವೃದ್ಧಿ ಎಂದರೆ. . . .

ಶ್ರೀ ಡಿ.ಬಿ.ಚಂದ್ರೇಗೌಡ:- ಟೌನ್ ಅಭಿವೃದ್ಧಿ ಅಲ್ಲ, ಬಾಗಲಕೋಟೆ ಮುಳುಗಿಹೋಗುತ್ತದೆ.

ಶ್ರೀ ಕೆ.ಜೆ.ಜಾರ್ಜ್:- ಮಾನ್ಯ ವಿರೋಧಪಕ್ಷದ ನಾಯಕರು ಒಂದು ವಿಷಯ ತಿಳಿದುಕೊಳ್ಳಬೇಕು. ಹಳೇ ಪಟ್ಟಣ ಮುಳುಗುತ್ತದೆ. ಹೊಸ ಪಟ್ಟಣ ಈಗ ಅಭಿವೃದ್ಧಿಯಾಗುತ್ತದೆ. We are going to create a new town-ship for Bagalkot. Bagalkot ಹೊಸ ಟೌನ್‌ಶಿಪ್ಪಿನ ಜನಸಂಖ್ಯೆ ಸುಮಾರು 1ಲಕ್ಷ, ಅದಕ್ಕೇ ತುಂಬ ಕೆಲಸ ಇದೆ. ನೀರಾವರಿ ಕೆಲಸ ಬೇರೆ, ಪುನರ್ವಸತಿ ಬೇರೆ. ಮೊದಲು ನೀರಾವರಿಯವರು ಕೆಲವು ಹಳ್ಳಿಗಳನ್ನು ಪುನರ್ವಸತಿ ಮಾಡುವ ಕೆಲಸವನ್ನು ಅವರೇ ಮಾಡುತ್ತಾ ಇದ್ದರು. ಇದು ದೊಡ್ಡ ಪಟ್ಟಣ ಮಾಡುವ ಕೆಲಸವಾಗಿದೆ. ಒಳ್ಳೆಯ ಬಾಗಲಕೋಟೆಯನ್ನೇ ಸರಿಯಾಗಿ ಪ್ಲಾನ್ ಮಾಡಿ ನಾವು ಮಾಡುತ್ತಿದ್ದೇವೆ.

ಶ್ರೀ ಅಜಯ್‌ಕುಮಾರ್ ಸರನಾಯಕ್:- ಮಾನ್ಯ ಅಧ್ಯಕ್ಷರೆ, I have asked '. . . . whether the Government has gone back from its earlier decision for winding up of Bagalkot Town Development Authority?". ಅದು ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದೀರಿ, ಈಗ ಐನು ಉತ್ತರ ಕೊಟ್ಟಿರಿ ಇದನ್ನೇ ಅಲ್ಲಿ ಕೊಡಬಹುದಲ್ಲ.

ಶ್ರೀ ಕೆ.ಜೆ.ಜಾರ್ಜ್: ಕೈಶ್ಚನ್‌ಗೆ ನಾವು ಈ ರಿಪ್ಲೈ ಕೊಟ್ಟಿದ್ದರೆ ವಿಶ್ವಬ್ಯಾಂಕಿನ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೆವು. ಅವರು ಡೈರೆಕ್ಷನ್ ಕೊಟ್ಟಿಲ್ಲ ಎಂದು ಕರೆಕ್ಟಾಗಿ ಹೇಳಿದ್ದೇನೆ. There is no direction by the World Bank.

ಜಯನಗರ ವಿಧಾನಸಭಾ ಕೊಳಚೆ ಪ್ರದೇಶಗಳ ಅಭಿವೃದ್ಧಿ.

(548) ಶ್ರೀ ರಾಮಲಿಂಗರೆಡ್ಡಿ (ಜಯನಗರ)ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿ ಗುರುತಿಸಿರುವ ಒಟ್ಟು ಕೊಳಚೆ ಪ್ರದೇಶಗಳೆಷ್ಟು ;

ಆ) ಈ ಕೊಳಚೆ ಪ್ರದೇಶಗಳಲ್ಲಿನ ಕುಟುಂಬಗಳೆಷ್ಟು ;

ಇ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಖರ್ಚು